ಬೇಕಾದ ಲ್ಯಾಬ್‌ಗಳಿಗೆ, ಬೇಕಾದ ನರ್ಸಿಂಗ್ ಹೋಂಗಳಿಗೆ ಕಳುಹಿಸಿಕೊಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಾನು ತಮ್ಮನ್ನು ಕೇಳುವುದು, ಇದೇ ರೀತಿ ಸಲಕರಣೆಗಳನ್ನು ಕೊಡದೇ ಬಿಟ್ಟರೆ ಕಾಲಕ್ರಮೇಣ ಸರ್ಕಾರಿ ಆಸ್ಪತ್ರೆಗಳಿಗೆ ಯಾರು ಬಡವರು ಬರುತ್ತಾರೆ, ಅವರಿಗೆ ಚಿಕಿತ್ಸೆ ಕೊಡುವುದು ನಿಲ್ಲಿಸುತ್ತೀರಿ ಎಲ್ಲರಿಗೂ ಖಾಸಗಿ ಲ್ಯಾಬರೇಟರಿಗಳಿಗೆ ಕಳುಹಿಸುತ್ತೀರಾ? ಸಿಬ್ಬಂದಿ ಉದ್ದೇಶ ಸರ್ಕಾರದ ಉದ್ದೇಶ ಇದೇ ಆಗಿದೆಯಾ?

ಡಾ: ಮಾಲಕರೆಡ್ಡಿ: ಮಾನ್ಯ ಅಧ್ಯಕ್ಷರೆ, ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಯಾವ ಪರಿಸ್ಥಿತಿ ಇದೆ, ಅದೇ ಪರಿಸ್ಥಿತಿ ಇಲ್ಲಿಯೂ ಇದೆ. ಇದನ್ನು ಪರಿಗಣಿಸಿ ಈ ಸರ್ಕಾರ ಬಂದ ಮೇಲೆ ವಾರ್ಷಿಕ ನಿರ್ವಹಣಾ ಬಗ್ಗೆ ಗುತ್ತಿಗೆ ಕೊಟ್ಟಿದೆ. ತತಕ್ಷಣ ಯಾವಾಗ ಕಂಪ್ಲೆಂಟ್ ಹೋಗುತ್ತದೆ ಆಗ ಮೆಕ್ಯಾನಿಕ್ ಬಂದು ರಿಪೇರಿ ಮಾಡುವ ವ್ಯವಸ್ಥೆ ಮಾಡಿದೆ. ಒಂದು ವೇಳೆ ಆ ಕೆಲಸ ಆಗದೇ ಇದ್ದ ಪಕ್ಷದಲ್ಲಿ ಅದಕ್ಕೆ ಸ್ಥಳೀಯವಾಗಿ ಕೆಲವೊಂದು ದೋಷ ಇರಬಹುದು. ಇದರ ಬಗ್ಗೆ ತಪಾಸಣೆ ಮಾಡಿ ವರದಿ ಕೊಡುತ್ತಾರೆ.

ಶ್ರೀ ಎಂ.ಪಿ.ಅಪ್ಪಚ್ಚು ರಂಜನ್: ಡೆಂಟಲ್‌ಗೆ ಸಂಬಂಧಪಟ್ಟ ಹಾಗೆ ಸುಮಾರು ಐದು ಕೋಟಿ ರೂಪಾಯಿಗಳ ಉಪಕರಣಗಳನ್ನು ಖರೀದಿ ಮಾಡಿದ್ದಾರೆ. ಸನ್ಮಾನ್ಯ ಮಂತ್ರಿಗಳು ಉತ್ತರ ಹೇಳುವ ಸಂದರ್ಭದಲ್ಲಿ ನಾವು ಉಪಕರಣ ಕಳುಹಿಸಿದ್ದೇವೆ. ಅದನ್ನು ಯೂಸ್ ಮಾಡುವುದಕ್ಕೆ ಡಾಕ್ಟರ್ ಇಲ್ಲವೆಂದು ಹೇಳುತ್ತಿದ್ದಾರೆ. ಕೊಡಗಿನಲ್ಲಿ ಒಂದೇ ಒಂದು ಡೆಂಟಿಸ್ಟ್ ಇಲ್ಲ. ಐದು ಕೋಟಿ ರೂಪಾಯಿಯ ಉಪಕರಣಗಳು ತುಕ್ಕು ಹಿಡಿದಿವೆ. ತಾವು ದಯವಿಟ್ಟು ಡೆಂಟಿಸ್ಟ್ ನೇಮಕ ಮಾಡುತ್ತೀರಾ?

ಡಾ: ಎ.ಬಿ.ಮಾಲಕ ರೆಡ್ಡಿ: ಸರ್ಕಾರ ಸ್ಥಳೀಯವಾಗಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟಿದೆ. ಎಲ್ಲೆಲ್ಲಿ ಡೆಂಟಲ್‌ಸರ್ಜನ್ಸ್ ಇಲ್ಲ ಅಲ್ಲಿ ನೇಮಕಾತಿ ಮಾಡಬೇಕೆಂದು ಹೇಳಿದ್ದೇವೆ.

ಔರಾದ್ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳು.

೧೫೭ (೧೭೭೩)

ಶ್ರೀ ಗುಂಡಪ್ಪ ವಕೀಲ್(ಔರಾದ್): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔರಾದ್ ತಾಲ್ಲೂಕಿನಲ್ಲಿ ಒಂದೂವರೆ ವರ್ಷದಿಂದ ಅಮರೇಶ್ವರ ಡಿಗ್ರಿ ಕಾಲೇಜಿನಲ್ಲಿ ಪ್ರಿನ್ಸಿಪಾಲರ ಹುದ್ದೆ ಖಾಲಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ:

ಆ) ಹಾಗಿದ್ದಲ್ಲಿ ಅದನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ: ಜಿ.ಪರಮೇಶ್ವರ್: (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು):

ಅ) ಹೌದು.

ಆ) ಆಯ್ಕೆ ಶ್ರೇಣಿ ಉಪನ್ಯಾಸಕರೊಬ್ಬರನ್ನು ಪ್ರಾಂಶುಪಾಲರನ್ನಾಗಿ ನೇಮಕ ಮಾಡುವ ಕಾಲೇಜು ಶಿಕ್ಷಣ ಆಯುಕ್ತರ ಪ್ರಸ್ತಾವನೆಯನ್ನು ಪರಿಗಣಿಸಿ ಶೀಘ್ರ ನೇಮಕ ಮಾಡಲಾಗುವುದು.

ಶ್ರೀ ಗುಂಡಪ್ಪ ವಕೀಲ್: ಮಾನ್ಯ ಅಧ್ಯಕ್ಷರೆ, ನಾಲ್ಕು ಲಕ್ಷ ಜನಸಂಖ್ಯೆ ಇರತಕ್ಕಂತಹ ನನ್ನ ಕ್ಷೇತ್ರ ಔರಾದ್ ತಾಲ್ಲೂಕಿನಲ್ಲಿ ಒಂದೇ ಒಂದು ಡಿಗ್ರಿ ಕಾಲೇಜ್ ಇದೆ. ಅದೂ ಸರ್ಕಾರದ್ದೂ ಅಲ್ಲ ಖಾಸಗಿ ಡಿಗ್ರಿ ಕಾಲೇಜ್, ಅಮರೇಶ್ವರ ಡಿಗ್ರಿ ಕಾಲೇಜ್ ಎಂದು ಇದೆ. ಎರಡು ವರ್ಷಗಳಿಂದ ಪ್ರಿನ್ಸಿಪಾಲ್ ಛೇಂಬರ್‌ನ್ನು ಸೀಸ್ ಮಾಡಿ ಅದಕ್ಕೆ ಒಂದು ಚೀಟಿ ಹಾಕಿ ಒಳಗೆ ಯಾರೂ ಪ್ರವೇಶ ಮಾಡಬಾರದು ಸರ್ಕಾರ ಪ್ರಿನ್ಸಿಪಾಲ್‌ರನ್ನು ಅಪಾಯಿಂಟ್‌ಮೆಂಟ್ ಮಾಡುವವರೆಗೆ ಎಂದು ಆ ಪ್ರಿನ್ಸಿಪಾಲ್ ಛೇಂಬರ್ ಮುಚ್ಚಿ ಹಾಕಿದರು. ಎರಡು ವರ್ಷಗಳಿಂದ ಪ್ರಿನ್ಸಿಪಾಲ್ ಇಲ್ಲ ಪ್ರಿನ್ಸಿಪಾಲ್ ಇಲ್ಲದೆ ಅಲ್ಲಿಯ ಆಡಳಿತ ಹೇಗೆ ನಡೆಯುತ್ತಿದೆ? ಕಾಲೇಜ್ ಹೇಗೆ ನಡೆಸಬೇಕು? ಶಿಕ್ಷಣದ ಮಟ್ಟ ಹೇಗೆ ಕಾಯ್ದುಕೊಂಡು ಬರಬೇಕು? ಎರಡು ವರ್ಷಗಳಿಂದ ಈ ಸಮಸ್ಯೆಯನ್ನು ನಾವು ಎದುರಿಸುತ್ತಿದ್ದೇವೆ. ಈ ಪ್ರಿನ್ಸಿಪಾಲ್ ಅಪಾಯಿಂಟ್ ಮಾಡುವುದಕ್ಕೆ ಇಬ್ಬರ ನಡುವೆ ಜಗಳ ಇದೆ. ಸೀನಿಯಾರಿಟಿ ಬೇಸಿಸ್ ಮೇಲೆ ನಾನು ಸೀನಿಯರ್, ನಾನು ಸೀನಿಯರ್ ಎಂದು ಹೇಳಿ ಇಬ್ಬರೂ ಲೆಕ್ಚರರ್ ಜಗಳ ಆಗಿ ಅದು ಸರ್ಕಾರದ ಗಮನಕ್ಕೆ ಬಂದಿದೆ. ಕಮೀಷನರ್‌ರವರು ಈ ಸೀನಿಯಾರಿಟಿ ಮೇಲೆ ಪ್ರಿನ್ಸಿಪಾಲ್ ಅಪಾಯಿಂಟ್ ಮಾಡಬೇಕೆಂದು ರೆಕಮೆಂಡ್ ಮಾಡಿ ಉನ್ನತ ಶಿಕ್ಷಣ ಸಚಿವರಿಗೆ ಫೈಲ್‌ಕಳುಹಿಸಿಕೊಟ್ಟು ಒಂಬತ್ತು ತಿಂಗಳುಗಳಾದವು. ಆ ಫೈಲ್ ಮೇಲೆ ಸರ್ಕಾರ ನಿದ್ದೆ ಮಾಡುತ್ತಿದೆ. ಪ್ರಿನ್ಸಿಪಾಲ್ ಕೊಡುವುದಕ್ಕಾಗುವುದಿಲ್ಲವೆಂದರೆ ಆ ಕಾಲೇಜ್‌ಗೆ ಬೀಗ ಹಾಕಿಬಿಡಿ. ವಿದ್ಯಾರ್ಥಿಗಳ ಜೀವನ ಹಾಳು ಮಾಡತಕ್ಕಂತಹ ಪ್ರಯತ್ನ ಮಾಡಬೇಡಿ. ಯಾವಾಗ ಮಾಡುತ್ತೀರಿ, ಮಾಡಲಿಲ್ಲವೆಂದರೆ ಅಲ್ಲಿರುವ ವಿದ್ಯಾರ್ಥಿಗಳಿಗೆ ಏನು ವ್ಯವಸ್ಥೆ ಮಾಡುತ್ತೀರಿ ಅದನ್ನು ನನಗೆ ಹೇಳಬೇಕು.

ಡಾ: ಜಿ.ಪರಮೇಶ್ವರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಔರಾದ್ ತಾಲ್ಲೂಕಿನಲ್ಲಿರುವ ಖಾಸಗಿ ಕಾಲೇಜಿನ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ, ಎಲ್ಲ

ವಿಷಯವನ್ನೂ ಅವರೇ ಹೇಳಿದ್ದಾರೆ. ಸಾಮಾನ್ಯವಾಗಿ ಖಾಸಗಿ ಕಾಲೇಜಿನ ಆಡಳಿತ ಇರತಕ್ಕಂಥದ್ದು ಖಾಸಗಿ ಸಂಸ್ಥೆಯವರ ಜೊತೆಯಲ್ಲಿ. ಅದಕ್ಕೆ ಸರ್ಕಾರ ನೇರವಾಗಿ ಪ್ರವೇಶ ಮಾಡುವುದಿಲ್ಲ ಆಡಳಿತ ಮಂಡಳಿಯಲ್ಲಿ ವಿಭಜನೆಯಾಗಿ ಎರಡು ಗುಂಪುಗಳಾಗಿವೆ. ನಾಗನಾಥ ಇದ್ದಲಗಾವ ಮತ್ತು ಇನ್ನೊಬ್ಬರಿಗೆ ಗಲಾಟೆ ಆಗಿದೆ. ಈ ವಿಷಯ ಕೋರ್ಟಿಗೆ ಕೂಡ ಹೋಗಿದೆ. ಆ ವಿಚಾರ ತಮ್ಮ ಗಮನದಲ್ಲಿದೆ ಎಂದು ನಾನು ಭಾವಿಸಿದ್ದೇನೆ. ಉಚ್ಚ ನ್ಯಾಯಾಲಯದಲ್ಲಿ ಇವತ್ತಿನ ದಿವಸ ರಿಟ್ ಪೆಂಡಿಂಗ್ ಇದೆ. ನಾವು ಯಾವುದೇ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರದಲ್ಲ ಆಗುವಿಲ್ಲ. ತಾವು ಏನು ಹೇಳಿದ್ದೀರಿ ಅದು ಸತ್ಯವಾದುದು. ಏಕೆಂದರೆ, ನಮ್ಮ ಕಮೀಷನರ್‌ರವರೂ ಕೂಡ ರೆಕಮೆಂಡ್ ಮಾಡಿದ್ದಾರೆ. ಒಂಬತ್ತು ತಿಂಗಳುಗಳಿಂದ ನನ್ನ ಕಡೆ ಫೈಲ್ ಇದೆ ಎಂದು ತಾವು ಏನು ಹೇಳಿದಿರಿ, ಅದು ಸತ್ಯಕ್ಕೆ ದೂರವಾದುದು. ನನ್ನ ಕಡೆ ನಾಲ್ಕರಿಂದ ೧೦ ದಿವಸದ ಒಳಗೆ ಯಾವುದೇ ಫೈಲ್ ಉಳಿಯುವುದಿಲ್ಲ. ಆದರೆ ಮಾನ್ಯ ಸದಸ್ಯರಿಗೆ ಒಂದು ಭರವಸೆ ಕೊಡುವುದಕ್ಕೆ ಇಷ್ಟಪಡುತ್ತೇನೆ, ನಮ್ಮ ಕಮೀಷನರ್‌ರವರು ಏನು ರೆಕಮೆಂಡ್ ಮಾಡಿದ್ದಾರೆ ಅದು ಯಾವುದೇ ಕಾನೂನು ಚೌಕಟ್ಟಿನಲ್ಲಿ ತೊಂದರೆಯಾಗದೆ, ಕಾನೂನಿಗೆ ಅಡ್ಡಿಬಾರದೆ ಇದ್ದರೆ ತಕ್ಷಣ ಅವರಿಗೆ ನಾನು ಅಲ್ಲಿಗೆ ಒಬ್ಬ ಪ್ರಿನ್ಸಿಪಾಲ್‌ರನ್ನು ನೇಮಕ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ಎಷ್ಟು ದಿವಸಗಳಲ್ಲಿ ತೆಗೆದುಕೊಳ್ಳುತ್ತೀರಿ ಎಂದು ಹೇಳಿ.

ಡಾ: ಜಿ. ಪರಮೇಶ್ವರ್: ಕೋರ್ಟಿಗೆ ಹೋಗಿರುವುದರಿಂದ ಎರಡು ವಷ್ಟವಾಗಿದೆ. ಡೀಟೈಲ್ಸ್ ಬೇಕಾದರೆ ಕಳುಹಿಸಿಕೊಡುತ್ತೇನೆ.

ಶ್ರೀ ಗುಂಡಪ್ಪ ವಕೀಲ್: ಕೋರ್ಟಿನಲ್ಲಿ ಇಲ್ಲ.

ಡಾ: ಜಿ. ಪರಮೇಶ್ವರ್: ಡೀಟೈಲ್ಸ್ ಕಳುಹಿಸಿಕೊಡುತ್ತೇನೆ, ಕೋರ್ಟಿನಲ್ಲಿ ಪೆಂಡಿಂಗ್ ಇರುವುದರಿಂದ ಡಿಲೇ ಆಗಿದೆಯೇ, ವಿನಃ ಸರ್ಕಾರದಿಂದ ಡಿಲೇ ಆಗಿಲ್ಲ. ೧೫ ದಿವಸದ ಒಳಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ನಾನು ಅವರಿಗೆ ಭರವಸೆ ಕೊಡುತ್ತೇನೆ.

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಔಷಧಗಳ ಖರೀದಿ.

೧೬೦ (೧೬೧೮)